ದೇಶಭಕ್ತರಾದ ಅವರ ಮಗನಾಗಿ ದೇಶದ ಸ್ವಾತಂತ್ರ್ಯ ನಂತರ ಪ್ರತಾಪ್ ಮೋಹನ್ ಅವರೂ ತಮ್ಮ ಪದವಿ ನಂತರ ಬೇರೆ ಕೆಲಸಗಳಿಗೆ ಸಾಕಷ್ಟು ಅವಕಾಶವಿದ್ದರೂ ಮಿಲಿಟರಿಯನ್ನು ಆಯ್ಕೆ ಮಾಡಿಕೊಂಡು ಭಾರತೀಯ ಸೇನೆಯನ್ನು ಸೇರಿದ್ದರು. ಹಿಮಾವೃತ ಕಾಶ್ಮೀರ, ಮರುಭೂಮಿ ಪ್ರದೇಶದ ರಾಜಸ್ತಾನ, ಸಿಕ್ಕಿಮ್‌ನಂತಹ ದುರ್ಗಮ ಸ್ಥಳಗಳಲ್ಲಿ ಸೇವೆ ಮಾಡಿದವರು.

ಕಾಪ್ಟನ್ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ ಅವರು ಚೀನಾ, ಪಾಕಿಸ್ತಾನ ಜೊತೆಯ ಯುದ್ಧಗಳಲ್ಲಿ ಸೇನೆಯನ್ನು ಮುನ್ನಡೆಸಿದವರಲ್ಲಿ ಅವರೂ ಒಬ್ಬರು. ಒಂದು ಯುನಿಟ್‌ದ ಮುಖ್ಯಸ್ಥರಾಗಿ ವೀರಾವೇಶದಿಂದ ಹೋರಾಡಿದವರು. ಚೀನಿಯರ ಜೊತೆಯ ಯುದ್ಧದಲ್ಲಿ ಅವರ ಸೈನ್ಯವನ್ನು ಬೆನ್ನಟ್ಟಿ ಅನೇಕ ಚೀನಿ ಸೈನಿಕರನ್ನು ಮಾರಣಹೋಮ ಮಾಡಿದ ಧೈರ್ಯಶಾಲಿ. ಅವರ ಜೊತೆಗಿನ ಸೈನಿಕರು ವೈರಿ ದಾಳಿಗೆ ಹುತಾತ್ಮರಾಗುತ್ತ ಹೋಗುತ್ತಿದ್ದರೂ ಅವರನ್ನು ಹುರಿದುಂಬಿಸಿ ತಾವೂ ಮುನ್ನುಗ್ಗಿ ಒಬ್ಬೊಬ್ಬ ವೈರಿ ಸೈನಿಕರನ್ನು ಹೊಡೆದು ಉರುಳಿಸುತ್ತಿದ್ದರು. ಕೊನೆಗೆ ಜೊತೆಯಲ್ಲಿನ ಸೈನಿಕರೆಲ್ಲರೂ ಯುದ್ಧಭೂಮಿಯಲ್ಲಿ ಅವಸಾನಗೊಂಡರೆ ಇವರೊಬ್ಬರೇ ಹೋರಾಡುತ್ತಿದ್ದರು. ಆ ವೇಳೆಯಲ್ಲಿಯೇ ಅವರನ್ನೇ ಗುರಿ ಮಾಡಿಕೊಂಡು ಎಲ್ಲಿಂದಲೋ ಬಂದ ಚಿಕ್ಕ ಬಾಂಬೊಂದು ಅವರ ಬಲಗೈ ತುಂಡಾಗಿ ಬೀಳುವಂತೆ ಮಾಡಿತ್ತು. ಆದರೆ ಅದಕ್ಕೂ ಎದೆಗುಂದದ ಈ ವೀರ ಸೇನಾನಿ ಎಡಗೈಯಲ್ಲಿ ಗನ್ ಹಿಡಿದು ಚೀನಿ ಸೈನಿಕನೊಬ್ಬನೂ ಭಾರತದ ಗಡಿಯೊಳಗೆ ನುಗ್ಗದಂತೆ ಹಲವಾರು ಗಂಟೆ ಹೋರಾಡಿದ ಏಕಾಂಗಿವೀರ.

ಕೈಯಿಂದ ರಕ್ತ ತೊಟ್ಟಿಕ್ಕುತ್ತಿದ್ದರೂ ಒಂದೇ ಕೈಯಿಂದ ವೈರಿ ಪಡೆಯನ್ನು ನಡುಗಿಸಿ ಮತ್ತೊಂದು ಪಡೆ ಬಂದು ಇವರ ಜೊತೆಗೂಡಿದಾಗ ಅವರನ್ನು ವೈರಿ ಸೈನಿಕರ ಹೆಡೆಮುರಿ ಕಟ್ಟುವಂತೆ ಪ್ರೋತ್ಸಾಹಿಸಿ ತಾವೂ ಅವರೊಡನೆ ಬಲಗೈಯಿಂದ ಸೋರುತ್ತಿರುವ ರಕ್ತವನ್ನು ಲೆಕ್ಕಿಸದೆ ಒಬ್ಬ ಚೀನಿ ಯೋಧನೂ ಭಾರತದ ನೆಲದಲ್ಲಿ ಕಾಲಿಡಬಾರದೆಂದು ಅವಿರತವಾಗಿ ಹೋರಾಡಿದಂತಹ ಸಿಂಹದ ಮರಿ. ಪಕ್ಕದಲ್ಲಿನ ಸೈನಿಕರು ವಿಶ್ರಮಿಸಲು ಹೇಳಿದಾಗಲೂ ಭಾರತಾಂಬೆಗೆ ಜಯದ ಕಿರೀಟವಿಟ್ಟಾಗಲೇ ತಮಗೆ ಸಮಾಧಾನವೆಂದು ಶತ್ರು ಪಾಳೆಯದ ನೂರಾರು ಸೈನಿಕರನ್ನು ಧರಾಶಾಯಿಯಾಗಿ ಮಾಡಿದಂತಹ ಅಪ್ರತಿಮ ರಣಕಲಿ. ಇನ್ನೇನು ವೈರಿ ಸೈನಿಕರು ಒಬ್ಬೊಬ್ಬರಾಗಿ ಅವಸಾನವಾಗುತ್ತಿದ್ದರೆ, ಇತ್ತ, ಅದಾವ ವಿಷಘಳಿಗೆಯೋ ಇವರ ತಂಡದ ಮೇಲೆ ಹಾರಿ ಬಂದಂತಹ ಬಾಂಬ್‌ವೊಂದನ್ನು ನೋಡಿ ಅದರಿಂದ ಇಡೀ ತಂಡವೇ ನಾಶವಾಗುವುದೆಂದು ಅರಿತು ಎಡಗೈಯಲ್ಲಿನ ಗನ್‌ನ್ನು ಅಲ್ಲಿಯೇ ಬೀಸಾಕಿ ಮೇಲಕ್ಕೆ ಜಿಗಿದು ಆ ಬಾಂಬನ್ನು ಕೈಯಲ್ಲಿ ಹಿಡಿದು ಪಕ್ಕದಲ್ಲಿನ ಕಂದಕಕ್ಕೆ ಹಾರಿ ಅಷ್ಟೆಲ್ಲಾ ಸೈನಿಕರ ತುಕಡಿಯನ್ನು ಪ್ರಾಣಾಪಾಯದಿಂದ ಕಾಪಾಡಿ ಹುತಾತ್ಮರಾದ ಅಗ್ರಣೀಯ ದೇಶಪ್ರೇಮಿ. ಅಷ್ಟು ಸೈನಿಕರ ಜೀವ ಉಳಿಸಿದ ಸಂಜೀವಿನಿ ಪ್ರತಾಪ್ ಮೋಹನ್ ಅವರ ಅನುಪಮ ಸೇವೆ ಗಮನಿಸಿದ ಭಾರತ ಸರಕಾರ ಅತ್ಯುನ್ನತ ಶೌರ್ಯ ಪ್ರಶಸ್ತಿಯಾದ 'ಪರಮವೀರ ಚಕ್ರ' ನೀಡಿ ಗೌರವಿಸಿತು. ತಮ್ಮ ಊರಿನ ಶೂರನೊಬ್ಬನ ಸಾಹಸಗಾಥೆಯ ಕುರುಹು ಆಗಿ ಊರಿನ ಜನಸಂದಣಿಯ ವರ್ತುಲದಲ್ಲಿ ಸ್ಥಾಪನೆಗೊಂಡು ಪ್ರತಾಪ್‌ಮೋಹನ್ ವರ್ತುಲವೆಂದೇ ಪ್ರಸಿದ್ಧಿಯಾಯಿತು.

*

ಅಂದು ಭಾನುವಾರವಾದ್ದರಿಂದ ಕಾಲೇಜಿಗೆ ಹೋಗುವ ಧಾವಂತವಿಲ್ಲವೆಂದು ತಡವಾಗಿಯೇ ವಾಕಿಂಗ್‌ಗೆ ಹೊರಟ ಜಗದೀಶ ಶೂಗಳನ್ನು ಹಾಕಿಕೊಳ್ಳುತ್ತಿರುವಾಗ ಆತನ ಮಡದಿ ಜ್ಯೋತಿ, ಪ್ರತಾಪ್ ಮೋಹನ್ ಸರ್ಕಲ್‌ನಲ್ಲಿ ನಡೆದಂಥ ದಾಂದಲೆ ಬಗ್ಗೆ ಟಿವಿಯಲ್ಲಿ ಬರುತ್ತಿರುವುದನ್ನು ಹೇಳಿದಾಗ ಆತನು ಕೆಲವು ಕ್ಷಣ ಟಿವಿಯತ್ತ ನೋಡಿ ಆತುರದಲ್ಲಿಯೇ 'ಜ್ಯೋತಿ,ನಾನು ಸರ್ಕಲ್‌ತನ ಹೋಗಿಬರ್ತೀನಿ' ಎಂದು ಮುಂದೆ ಮಾತನಾಡದೆ ಅವಸರದಲ್ಲಿಯೇ ನೇರವಾಗಿ ಸರ್ಕಲ್‌ನತ್ತ ಧಾವಿಸಿದ.

ಜಗದೀಶ ಸರ್ಕಲ್‌ಗೆ ಬಂದಾಗ ಆಗಲೇ ಅಲ್ಲಿ ಸಾಕಷ್ಟು ಜನ ಸೇರಿದ್ದರು. ಅವರನ್ನು ಚದುರಿಸಲು ಪೊಲೀಸರು ಯತ್ನಿಸುತ್ತಿದ್ದರು. ಪರಿಚಿತ ಪೊಲೀಸನೊಬ್ಬನನ್ನು ಘಟನೆ ಬಗ್ಗೆ ಕೇಳಿದಾಗ ಯಾರೋ ಒಬ್ಬ ಯುವಕ ಕಾಲೇಜು ವಿದ್ಯಾರ್ಥಿನಿಯನ್ನು ಕೊಲೆಗೈದು ಓಡಿ ಹೋಗಿದ್ದಾನೆ. ಅದನ್ನು ನೋಡಿ ದಾರಿಹೋಕರು ಅವನತ್ತ ಹೋದಾಗ ಅವರ ಮೇಲೂ